ವಿಜಯವಾಣಿ
Bengaluru Edition
Aug 24, 2025 Page No. 2
ಕನ್ನಡ ದಿನಪತ್ರಿಕೆ

ತರಕಾರಿ ಖರೀದಿಗೆ ಮುಗಿಬಿದ್ದರು



ಜಿಕೆವಿಕೆಯಲ್ಲಿ ನಡೆದ ರೈತ ಸಂತೆಯಲ್ಲಿ ನಾಗರಿಕರು ಸೊಪ್ಪು,ತರಕಾರಿ ಖರೀದಿಸಿದರು.

ಬೆಂಗಳೂರು: ತಾಜಾ ಸೊಪ್ಪು, ತರಕಾರಿ, ಕೈಗೆಟಕುವ ದರದಲ್ಲಿ ಹಣ್ಣುಗಳನ್ನು ಹೆಚ್ಚಿನ ಸಂಖ್ಯೆಯ ಗೃಹಿಣಿಯರು ಮುಗಿಬಿದ್ದು ಖರೀದಿಸಿದರು. ಜತೆಗೆ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳನ್ನೂ ಸಿಟಿ ಜನ ಖರೀದಿ ಭರಾಟೆಯಲ್ಲಿ ತೊಡಗಿದ್ದ ದೃಶ್ಯ ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಿದ್ದ ರೈತ ಸಂತೆಯಲ್ಲಿ ಕಂಡುಬಂದಿತು.

ತಿಂಗಳ 4ನೇ ಶನಿವಾರ ಜಿಕೆವಿಕೆಯಲ್ಲಿ ಆಯೋಜಿಸುತ್ತಿರುವ ಸಂತೆಗೆ ಹೆಚ್ಚಿನ ಜನರು ಭೇಟಿ ನೀಡುತ್ತಿದ್ದಾರೆ. ರೈತರಿಂದ ಗ್ರಾಹಕರಿಗೆ ನೇರ ಮಾರಾಟ ವ್ಯವಸ್ಥೆ ಇರುವುದರಿಂದ ಮತ್ತು ಕೈಗೆಟಕುವ ದರದಲ್ಲಿ ಹಣ್ಣು-ತರಕಾರಿ ಲಭ್ಯವಾಗುವುದರಿಂದ ನಾಗರಿಕರಿಗೆ ಸಂತೆಯು ಹೊಸ ಖರೀದಿ ಸ್ಥಳವಾಗಿ ಮಾರ್ಪಡುತ್ತಿದೆ. ಈ ವೇಳೆ ಕೃಷಿ ವಿವಿಯ ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ ಮತ್ತಿತರರಿದ್ದರು.

ಕನ್ನಡಪ್ರಭ
BENGALURU Edition
Aug 24, 2025 Page No. 02



ಹೆಬ್ಬಾಳ ರೈತ ಸಂತೆಗೆ ಉತ್ತಮ ಪ್ರತಿಕ್ರಿಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಹೆಬ್ಬಾಳದ ಜಿಕೆವಿಕೆಯಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ನೇರವಾಗಿ ರೈತರಿಂದಲೇ ಕೃಷಿ ಉತ್ಪನ್ನಗಳ ಖರೀದಿಗೆ ಅವಕಾಶ ಇರುವುದಿರಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಾವು, ಹಲಸು, ಬೆಟ್ಟದ ನೆಲ್ಲಿ, ನುಗ್ಗೆ ಸೊಪ್ಪಿನ ಚಟ್ನಿ ಪುಡಿ, ಹಲಸಿನ ಉಪ್ಪಿನ ಕಾಯಿ, ಬಾಳೆ ಹೂವಿನ ತೊಕ್ಕು, ಬೆಟ್ಟದ ನೆಲ್ಲಿ ಜಾಮ್ ಮತ್ತಿತರ ಉತ್ಪನ್ನಗಳನ್ನು ಖರೀದಿಸಿದರು. ಎತ್ತಿನ ಬಂಡಿ ಸವಾರಿಗೂ ಅವಕಾಶವಿದ್ದು ಮಕ್ಕಳು ಗಾಡಿಯಲ್ಲಿ ಸಂಚರಿಸಿ ಸಂಭ್ರಮಿಸಿದರು. ವಿವಿಯು ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯ ವರ್ಧಿತ ಉತ್ಪನ್ನಗಳು, ಬಟರ್ ಫ್ರೂಟ್, ಡ್ರಾಗನ್ ಫ್ರೂಟ್, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳ ಮಾರಾಟ ಹೆಚ್ಚಾಗಿ ಕಂಡುಬಂತು.

ಕೃಷಿ ಉತ್ಪನ್ನಗಳು, ಪರಿಕರಗಳ ಪ್ರದರ್ಶನ | ಖರೀದಿ ಭರಾಟೆ ಜೋರು

ಜಿಕೆವಿಕೆ ಆವರಣದಲ್ಲಿ ಯಶಸ್ವಿ ರೈತ ಸಂತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆ ಗ್ರಾಹಕರನ್ನು ವಿಶೇಷವಾಗಿ ಸೆಳೆಯಿತು.

ಕೃಷಿ ವಿವಿಯ ಕೃಷಿ ಮಹಾವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಘಟಕಗಳು ಹಾಗೂ ಸಂಶೋಧನಾ ಕೇಂದ್ರಗಳು ಅಭಿವೃದ್ಧಿಪಡಿಸಿರುವ ಕೃಷಿ ಉತ್ಪನ್ನಗಳು, ಪರಿಕರಗಳು ಮತ್ತು ವಿಶ್ವವಿದ್ಯಾನಿಲಯದ ವೈಜ್ಞಾನಿಕ ಸಲಹೆಗಳಿಂದ ರೈತರು ಹಾಗೂ ಸಂಸ್ಥೆಗಳು ಬೆಳೆದಿರುವ ಕೃಷಿ ಉತ್ಪನ್ನಗಳು, ಅಭಿವೃದ್ಧಿಪಡಿಸಿರುವ ಪರಿಕರಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು.

ರೈತರಿಂದಲೇ ನೇರವಾಗಿ ತಾಜಾ ಕೃಷಿ ಉತ್ಪನ್ನಗಳನ್ನು ಖರೀದಿಸಲು ಅವಕಾಶವಿದೆ. ಹೀಗಾಗಿ, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸಂತೆಗೆ ಬರುತ್ತಿದ್ದಾರೆ. ರೈತ ಸಂತೆಯಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆಯು ಹೊಸ ಸ್ಪರ್ಶ ಪಡೆದುಕೊಂಡಿದೆ. ಸಂತೆಯಲ್ಲಿ ಹೂವು, ಹಣ್ಣು,ತೆಂಗಿನಕಾಯಿ,ತರಕಾರಿ, ನುಗ್ಗೆಸೊಪ್ಪು, ನೆಲ್ಲಿಕ್ಕಾಯಿ, ಕವಳಿಕಾಯಿ, ಅಲಸಂದೆ, ರಾಜಮುಡಿ ಅಕ್ಕಿ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಎತ್ತಿನ ಬಂಡಿ ಸವಾರಿಯು ನಗರ ಜಾನುವಾರುಗಳು ಪ್ರದೇಶದ ಮಕ್ಕಳಿಗೆ ಮನರಂಜನೆ ಒದಗಿಸಿತು. ಸಂತೆಯಲ್ಲಿದ್ದ ನಾನಾ ತಳಿಯ ನೋಡುಗರನ್ನು ಸೆಳೆಯುತ್ತಿದ್ದವು. ಕೃಷಿ ವಿವಿ ಅಭಿವೃದ್ಧಿಪಡಿಸಿರುವ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ನಾನಾ ಸಸ್ಯಾಭಿವೃದ್ಧಿ ಸಾಮಗ್ರಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಅಲ್ಲದೇ ಹಲಸು, ಬಟರ್ ಫ್ರೂಟ್, ಡ್ರಾಗನ್ ಫ್ರೂಟ್, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಆಡಕೆ ಉತ್ಪನ್ನಗಳು, ರೇಷ್ಮೆ ಕೃಷಿ ಉಪ ಉತ್ಪನ್ನಗಳು, ಜೇನುಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು, ಪಶುಸಂಗೋಪನೆ, ರಾಜಮುಡಿ ಅಕ್ಕಿ, ರಾಸಾಯನಿಕ ಮುಕ್ತ ಬೆಲ್ಲ ಎಲ್ಲರ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ, ಕುಲಸಚಿವ ಡಾ. ಕೆ.ಸಿ.ನಾರಾಯಣಸ್ವಾಮಿ ಮತ್ತು ವಿಸ್ತರಣಾ ನಿರ್ದೇಶಕ ಡಾ. ವೈ.ಎನ್. ಶಿವಲಿಂಗಯ್ಯ ಉಪಸ್ಥಿತರಿದ್ದರು.



ಮೌಲ್ಯವರ್ಧಿತ ಉತ್ಪನ್ನಗಳ ಆಕರ್ಷಣೆ

ಪ್ರಜಾವಾಣಿ
ಭಾನುವಾರ • ಆಗಸ್ಟ್ 24, 2025

ಪ್ರಜಾವಾಣಿ ವಾರ್ತೆ



ಶನಿವಾರ ನಡೆದ ರೈತ ಸಂತೆಯಲ್ಲಿ ಸಾರ್ವಜನಿಕರು ತರಕಾರಿ ಖರೀದಿಸಿದರು

ಬೆಂಗಳೂರು: ನುಗ್ಗೆ ಸೊಪ್ಪಿನ ಚಟ್ನಿ ಪುಡಿ, ಹಲಸು, ಮಾವು ಮತ್ತು ಬೆಟ್ಟದ ನೆಲ್ಲಿ ಜಾಮ್, ಹಲಸಿನ ಉಪ್ಪಿನ ಕಾಯಿ, ಆಲಂಕಾರಿಕ ಮೀನುಗಳು ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳು ರೈತ ಸಂತೆಯಲ್ಲಿ ಸಾರ್ವಜನಿಕರನ್ನು ಸೆಳೆದವು.

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಶನಿವಾರ ರೈತ ಸಂತೆ ಆಯೋಜಿಸಿತ್ತು. ಹೂವು, ಹಣ್ಣು, ತೆಂಗಿನಕಾಯಿ, ತರಕಾರಿ ಮಾರಾಟ ಜೋರಾಗಿತ್ತು. ಮಾಲೂರಿನ 'ಅಮೃತ್ ಆಹಾರ ಉತ್ಪನ್ನಗಳು' ಸ್ವಸಹಾಯ ಸಂಘದ ಚರಿ ಮಿಲೆಟ್ ಮಾಲ್ಟ್ ಉತ್ಪನ್ನ ಗ್ರಾಹಕರನ್ನು ಸೆಳೆಯಿತು.

ಕೊಯ್ಲೋತ್ತರ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಯೋಜನೆಯ ಅಡಿಯಲ್ಲಿ ಸಿರಿಧಾನ್ಯಗಳಿಂದ ಹರಳು ಮಾಡುವ ಯಂತ್ರ, ಮುಸುಕಿನ ಜೋಳದ ತೆನೆಗಳಿಂದ ಕಾಳು ಬಿಡಿಸುವ ಯಂತ್ರ ಮತ್ತು ಹರಳು ಹೊಟ್ಟು ತೆಗೆಯುವ ಯಂತ್ರಗಳು ಆಕರ್ಷಣೀಯವಾಗಿದ್ದವು. ಮಕ್ಕಳು ಎತ್ತಿನ ಬಂಡಿಯ ಸವಾರಿ ಮಾಡಿದರು. ಸಂತೆಯ ಅಂಗಳದಲ್ಲಿ ವಿವಿಧ ಜಾನುವಾರುಗಳು ಗಮನ ಸೆಳೆದವು.

ಬೆಂಗಳೂರು ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಪ್ರಮುಖವಾಗಿ ತೋಟಗಾರಿಕಾ ಬೆಳೆಗಳಾದ ಮಾವು, ನೇರಳೆ, ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ ಕೃಷಿ ಯಂತ್ರೋಪಕರಣಗಳ ಖರೀದಿಗೆ ಅವಕಾಶ ನೀಡಲಾಗಿತ್ತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ರೈತ ಸಂತೆ ಉದ್ಘಾಟಿಸಿದರು.

KARNATAKA VETERINARY, ANIMAL & FISHERIES SCIENCES UNIVERSITY,
Nandinagar, BIDAR-585226, Karnataka

MBA (Food Business)
ADMISSION NOTIFICATION

No.R/MBA-Admn/Notification/2025-26/ Date: 25-08-2025

Online applications are invited for admission to **MBA** (FOOD BUSINESS) at Dairy Science College, Hebbal, Bengaluru Campus of the university for the Academic year 2025-26.

Application Fee: Rs.750/- for SC/ST/Cat-1 and Rs.1500/- for Others

Mode of Payment: ONLINE to the account of Assistant Comptroller, MBA Revolving Fund (Canara Bank, Hebbal, A/C No. 0425101050836, IFSC code: CNRB0000425).

Important Dates:
Commencement of online application: 25-08-2025
Last date for submission of application: 26-09-2025
Date of written test, GD and Interview: 10-10-2025
For eligibility, prospectus and other details visit www.foodmba.in

By order
Sd/-
(Dr. P T Ramesh)
Registrar

Hindu Pg 06

ಉದಯವಾಣಿ
ಭಾನುವಾರ, ಆಗಸ್ಟ್ 24, 2025

ಜಿಕೆವಿಕೆ ರೈತ ಸಂತೆಗೆ ಮನಸೋತ ಬೆಂಗಳೂರಿಗರು

ಮಧ್ಯವರ್ತಿಗಳ ಹಾವಳಿ ತಪ್ಪಿಸಿ ರೈತರು-ಗ್ರಾಹಕರ ನಡುವೆ ನೇರ ಮಾರಾಟಕ್ಕೆ ಅವಕಾಶ । ಸಿರಿಧಾನ್ಯದ ವಿಶೇಷ ಉತ್ಪನ್ನಗಳಿಗೆ ಬೇಡಿಕೆ
ಜಾನುವಾರು ನೋಡಿ, ಮುಟ್ಟಿ ಆನಂದಿಸಿದ ಮಕ್ಕಳು । ಕೋಲಾರ, ಶ್ರೀನಿವಾಸಪುರ, ರಾಮನಗರ, ದೇವನಹಳ್ಳಿಯಿಂದ ಆಗಮಿಸಿದ್ದ ರೈತರು

■ ಉದಯವಾಣಿ ಸಮಾಚಾರ



ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಬೆಳೆಗಾರರು ಹಾಗೂ ವಿವಿಧ ಮಹಿಳಾ ಸ್ವ-ಸಹಾಯ ಸಂಘದ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ರೈತ ಸಂತೆಯಲ="ಲಿ ತಾಜಾ ತರಕಾರಿ ಖರೀದಿಸುತ್ತಿರುವ ಗ್ರಾಹಕರು.

- ಕೃಷಿ ವಿವಿಯಿಂದ ಪ್ರತಿ ತಿಂಗಳ ಪ್ರತಿ ನಾಲ್ಕನೇ ಶನಿವಾರ ವಿಭಿನ್ನವಾದ ರೈತ ಸಂತೆ ಆಯೋಜನೆ
- ಕೃಷಿ ವಿವಿಯು ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ

ಎತ್ತಿನ ಬಂಡಿ ಸವಾರಿ ಆಕರ್ಷಣೆ

ಈ ಬಾರಿಯ ರೈತ ಸಂತೆಯಲ್ಲಿ 'ಎತ್ತಿನ ಬಂಡಿ ಸವಾರಿ' ಆಕರ್ಷಕವಾಗಿ ನಗರದ ಮಕ್ಕಳನ್ನು ಸೆಳೆಯಿತು. ಬಂಡಿಯಲ್ಲಿ ಕುಳಿತು ಸಂತೆಯ ಅಂಗಳದಲ್ಲಿದ್ದ ವಿವಿಧ ಜಾನುವಾರುಗಳನ್ನು ಮಕ್ಕಳು ನೋಡಿ ಮುಟ್ಟಿ ಆನಂದಿಸಿದರು. ವಿವಿಧ ಕೃಷಿ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳಿಂದ ಸಂಬಂಧಿಸಿದ ಕೃಷಿ ಮಾಹಿತಿಯನ್ನು ಸಾರ್ವಜನಿಕರು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ವಿ. ಸುರೇಶ, ಕುಲಸಚಿವ ಡಾ.ಕೆ.ಸಿ.ನಾರಾಯಣಸ್ವಾಮಿ, ವೈ.ಎನ್. ಶಿವಲಿಂಗಯ್ಯ ಸೇರಿದಂತೆ ಮತ್ತಿತರರು ಇದ್ದರು.

ನಾಗರಿಕರಿಂದ ಉತ್ತಮ ಸ್ಪಂದನೆ: ಗೌರಿ-ಗಣೇಶ ಹಬ್ಬದ ಸನಿಹದಲ್ಲಿ ಏರ್ಪಡಿಸಿದ್ದ ರೈತ ಸಂತೆಗೆ ಬೆಂಗಳೂರು ನಾಗರಿಕರಿಂದ ಉತ್ತಮ ಸ್ಪಂದನೆ ದೊರೆಯಿತು. ಎಂದಿನಂತೆ ಈ ಬಾರಿಯ ರೈತ ಸಂತೆಯಲ್ಲಿ ರೈತರು ಬೆಳೆದ ನಾನಾ ತರಹದ ತಾಜಾ ತರಕಾರಿಗಳ ಜೊತೆಗೆ ಕೃಷಿ ವಿವಿಯು ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣ, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಅಣಬೆ, ಜೇನು ಕೃಷಿ ಮೊದಲಾದ ಉತ್ಪನ್ನಗಳು ನಗರದ ಜನರನ್ನು ಸೆಳೆದವು.

'ಮಿಲೆಟ್ ಮಾಲ್ಟ್' ಉತ್ಪನ್ನಗಳಿಗೆ ಬೇಡಿಕೆ: ವಿಶೇಷವಾಗಿ ಮಾಲೂರಿನ ಮಹಿಳಾ ಸ್ವ-ಸಹಾಯ ಸಂಘ (ಅಮೃತ್ ಆಹಾರ ಉತ್ಪನ್ನಗಳು)ತಯಾರಿಸಿದ್ದ ಆರೋಗ್ಯಕರವಾದ 'ಚರಿ ಮಿಲೆಟ್ ಮಾಲ್ಟ್' ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಇದರೊಂದಿಗೆ ಹೂವುಗಳು, ಮೌಲ್ಯವರ್ಧಿತ ಪದಾರ್ಥಗಳಾದ ನುಗ್ಗೆ ಸೊಪ್ಪಿನ ಚಟ್ನಿಪುಡಿ, ಹಲಸು, ಮಾವು, ಬೆಟ್ಟದ ನೆಲ್ಲಿ ಜಾಮ್, ಹಲಸಿನ ಉಪ್ಪಿನಕಾಯಿ, ಬೆಲ್ಲಕಾಯಿ ತೊಕ್ಕು, ಬಾಳೆ ಹೂವಿನ ತೊಕ್ಕು ಮೊದಲಾದ ಪದಾರ್ಥಗಳನ್ನು ಗ್ರಾಹಕರು ಖರೀದಿಸಿದರು. ರೈತ ಸಂತೆ ಹಿನ್ನೆಲೆ ಕೋಲಾರ, ಶ್ರೀನಿವಾಸಪುರ, ರಾಮನಗರ, ದೇವನಹಳ್ಳಿ ಸೇರಿದಂತೆ ಬೆಂಗಳೂರು ಸುತ್ತಮುತ್ತಲಿನ ರೈತರು ಹಾಗೂ ಸಾರ್ವಜನಿಕರು ಆಗಮಿಸಿದ್ದರು.

ಶೇ.40ರಷ್ಟು ಆನ್‌ಲೈನ್‌ನಲ್ಲೇ ವಹಿವಾಟು | ವಾರ್ಷಿಕ ವ್ಯವಹಾರ 100ರಿಂದ 125 ಕೋಟಿ ರೂ.ಗೆ ಏರಿಕೆ ನಿರೀಕ್ಷೆ

ಐಫ್ಯಾಬ್‌ನಲ್ಲಿ ಹೂವು ಹರಾಜಿಗೆ ಆ್ಯಪ್, ವಹಿವಾಟು ಹೆಚ್ಚಳ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com



ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ (ಐಫ್ಯಾಬ್)ದಲ್ಲಿ ತಾಜಾ ಹೂವು ಹರಾಜಿಗೆ ಮೊಬೈಲ್ ಆ್ಯಪ್ ಆಧಾರಿತ ಆನ್‌ಲೈನ್ ಸೇವೆ ಪರಿಚಯಿಸಿದ್ದು, ವಾರ್ಷಿಕ ವಹಿವಾಟಿನಲ್ಲಿ ಗಣನೀಯ ಏರಿಕೆ ಕಂಡಿದೆ. ಕಳೆದ ವರ್ಷ 100 ಕೋಟಿ ರೂ. ಇದ್ದದ್ದು ಈಗ 120-125 ಕೋಟಿ ರೂ. ಗುರಿ ತಲುಪುವತ್ತ ಸಾಗಿದೆ.

ಈ ಹಿಂದೆ ಸ್ಥಳಕ್ಕೇ ಬಂದು ಖರೀದಿಸಬೇಕಿದ್ದುದರಿಂದ ಖರೀದಿದಾರರಿಗೆ ತೊಂದರೆಯಾಗುತ್ತಿತ್ತು. ಕೆಲವೊಮ್ಮೆ ಸಕಾಲದಲ್ಲಿ ಖರೀದಿಯಾಗದಿದ್ದರೆ ಹೂವುಗಳು ಬಾಕಿ ಉಳಿಯುವ ಸಾಧ್ಯತೆಯೂ ಇತ್ತು. ಇದೀಗ ಮೊಬೈಲ್ ಆ್ಯಪ್ ಸೇವೆಯಿಂದಾಗಿ ಹೂವುಗಳು ಬೇಗ ಮಾರಾಟವಾಗುತ್ತಿದೆ. ಉತ್ತಮ ದರವೂ ಸಿಗುತ್ತಿದೆ.

ವಿಶೇಷ ತಂತ್ರಜ್ಞಾನ ಆಧಾರಿತ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿರುವುದರಿಂದ ಆದರ ಮೂಲಕ ಕುಳಿತಲ್ಲಿಂದಲೇ ಲಾಭದಾಯಕ ದರ ನೋಡಿಕೊಂಡು ಹೂವುಗಳನ್ನು ಬಿಡ್ ಮಾಡಬಹುದು. ಮೇ ತಿಂಗಳಿಂದ ಪ್ರಾಯೋಗಿಕವಾಗಿ ಈ ಸೇವೆ ಆರಂಭಿಸಲಾಗಿದ್ದು, ಈಗಾಗಲೇ ಶೇ.40ರಷ್ಟು ಖರೀದಿದಾರರು ಆನ್‌ಲೈನ್ ನಲ್ಲಿಯೇ ಖರೀದಿ ಮಾಡುತ್ತಿದ್ದಾರೆ. ಖರೀದಿ ನಂತರ ಆನ್‌ಲೈನ್‌ನಲ್ಲೇ ಹಣ ಪಾವತಿಸಿ, ಹೂವುಗಳನ್ನು ತರಿಸಿಕೊಳ್ಳಬಹುದು. ಗುಣಮಟ್ಟದ ಪ್ರಮಾಣೀಕರಿಸಿಯೇ ಮಾರಾಟ ಮಾಡುವುದರಿಂದ ಗುಣಮಟ್ಟದಲ್ಲಿ ರಾಜಿಯಿಲ್ಲ. ಇದಕ್ಕಾಗಿ ತಜ್ಞರ ತಂಡವೂ ಇದೆ. ಹೀಗಾಗಿ, ನಿರಾತಂಕವಾಗಿ ಹೂವುಗಳನ್ನು ಖರೀದಿಸಬಹುದು ಎನ್ನುತ್ತಾರೆ ಐಫ್ಯಾಬ್ ಅಧಿಕಾರಿಗಳು.

ಯಾವ್ಯಾವ ಹೂವುಗಳ ಮಾರಾಟ?: ಐಫ್ಯಾಬ್‌ನಲ್ಲಿ ಗುಲಾಬಿ, ಕ್ರಿಸಾಂತಮಮ್, ಜಿಪ್ಸೊಫಿಲಾ, ಲಿಮೋನಿಯಂ, ಆರ್ಕಿಡ್, ಸೂರ್ಯಕಾಂತಿ ಮತ್ತಿತರ ಹೂವುಗಳು ದೇಶ-ವಿದೇಶಗಳಲ್ಲಿ ಅಧಿಕ ಬೇಡಿಕೆಯಿದೆ. ಹರಾಜಿನೊಂದಿಗೆ ಮಾರಾಟವಾಗುತ್ತವೆ. ಕ್ರಿಸ್‌ಮಸ್ (ಡಿ.25), ಹೊಸ ವರ್ಷ ಸಾಮಾನ್ಯ ದಿನಗಳಲ್ಲಿ ನಿತ್ಯವೂ 5-6 ಲಕ್ಷ (ಪ್ರ.1), ಪ್ರೇಮಿಗಳ ದಿನ (ಫೆ.14) ಹೂಗಳು ಮಾರಾಟವಾಗುತ್ತವೆ. ಗುಲಾಬಿ ಪ್ರಯುಕ್ತ ಕೆಂಪು ಗುಲಾಬಿ ಹೆಚ್ಚು ಸೇರಿದಂತೆ ಕಟ್ ಫ್ಲವರ್‌ಗಳ ಪ್ರಮಾಣದಲ್ಲಿ ರವ್ಯಾಗುತ್ತದೆ.

ಬೆಳೆಗಾರರು, ಖರೀದಿದಾರರಿಗೆ ಅನುಕೂಲ

2002ರ ಮೇ 1ರಂದು ಆರಂಭವಾದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ (ಐಫಕ್ ಎಬಿ)ದ ಉದ್ದೇಶ ಮಧ್ಯವರ್ತಿಗಳ ಹಾವಳಿಯಿಲ್ಲದೆ, ಗುಣಮಟ್ಟದ ಹೂವುಗಳ ಮಾರಾಟ ಮತ್ತು ಖರೀದಿ ವ್ಯವಸ್ಥೆ ಕಲ್ಪಿಸುವುದು. ಬೆಳೆಗಾರರು ಮತ್ತು ಖರೀದಿದಾರರಿಗೆ ಐಫ್ಯಾಬ್ ಸದಸ್ಯತ್ವವನ್ನೂ ನೀಡಲಿದೆ. ಸದ್ಯ 400 ಮಂದಿ ರೈತರು ಮತ್ತು 300 ಮಂದಿ ಖರೀದಿದಾರರಿದ್ದಾರೆ. ಈ ಸಂಖ್ಯೆ ಆಗಾಗ್ಗೆ ಏರುಪೇರಾಗುತ್ತಿರುತ್ತದೆ.

ಗುಣಮಟ್ಟ ಖಾತರಿ ಬಳಿಕವೇ ಮಾರಾಟ

"ಕೆಲವು ಮಾನದಂಡಗಳ ಅನುಸಾರ ಹೂವಿನ ಗುಣಮಟ್ಟವನ್ನು ಪ್ರಮಾಣೀಕರಿಸಿದ ನಂತರವೇ ಐಫ್ಯಾಬ್‌ನಲ್ಲಿ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುವುದು. ಋತುಮಾನಕ್ಕೆ ಅನುಗುಣವಾಗಿ ದರಗಳು ಏರುಪೇರಾಗುತ್ತವೆ. ಗುಣಮಟ್ಟದ ಆಧಾರದಲ್ಲಿ ಗ್ರೇಡಿಂಗ್ ಮಾಡಿ ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗುವುದು. ಹೀಗಾಗಿ, ಕೆಲ ವರ್ಷಗಳಿಂದ ನಮ್ಮ ಸಂಸ್ಥೆಯ ವಾರ್ಷಿಕ ವಹಿವಾಟು ಹೆಚ್ಚಾಗಿದೆ. ಎರಡು ವರ್ಷಗಳ ಹಿಂದೆ ಸುಮಾರು 75 ಕೋಟಿಯಿದ್ದುದು, ಕಳೆದ ವರ್ಷ 100 ಕೋಟಿ ರೂ.ಗೆ ಏರಿಕೆಯಾಗಿತ್ತು. ಈ ವರ್ಷ 125 ಕೋಟಿ ರೂ. ವಹಿವಾಟಿನ ಗುರಿ ಹೊಂದಲಾಗಿದೆ," ಎಂದು ಐಫ್ಯಾಬ್ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ. ವಿಶ್ವನಾಥ್ ತಿಳಿಸಿದರು.



ಮೊಬೈಲ್ ಆ್ಯಪ್ ಮೂಲಕ ಹೂವು ಬಿಡ್ ಮಾಡುವ ಅವಕಾಶ ನೀಡಲಾಗುತ್ತಿದೆ. ಪ್ರಾಯೋಗಿಕ ಹಂತದಲ್ಲಿ ಬೆಂಗಳೂರಿಗರಿಗೆ ಮಾತ್ರ ಇದರ ಬಳಕೆಯ ಹಕ್ಕು ನೀಡಲಾಗಿತ್ತು. ಇದರ ಸಾಧಕ-ಬಾಧಕಗಳನ್ನು ಪರಿಶೀಲಿಸಿದ ನಂತರ ಮುಂಬರುವ ದಿನಗಳಲ್ಲಿ ನಾನಾ ಭಾಗಗಳ ಖರೀದಿದಾರರಿಗೂ ಈ ಬಳಕೆಯ ಹಕ್ಕು ವಿಸ್ತರಿಸಲಾಗುವುದು. ಭೌತಿಕವಾಗಿಯೂ ಹಾಲ್‌ಗಳ್ಳುವವರಿಗೆ ಅವಕಾಶ ಇದೆ.

- ಡಾ. ಎಂ. ವಿಶ್ವನಾಥ್ ವ್ಯವಸ್ಥಾಪಕ ನಿರ್ದೇಶಕರು, ಐ ಫ್ಯಾಬ್

V-karnataka Pg 05

Union Minister asks ICAR to expedite research on whether arecanut is carcinogenic or not

The Hindu Bureau
BENGALURU

Union Agriculture Minister Shivaraj Singh Chouhan has asked the Indian Council for Agricultural Research (ICAR) to expedite the research on whether arecanut is carcinogenic or not. The research team has been asked to submit a report within a time frame.

The Minister, who held a meeting with Union Ministers from Karnataka and representatives from arecanut-growing regions in the State, said that the ICAR had been asked to conduct the research in the light of the World Health Organisation's statement that said that the arecanut was carcinogenic, which had caused confusion.

A release said that the Minister observed that Indians had been consuming arecanut since time immemorial, and it was used in every auspicious occasion in the country.



ICAR has been asked to conduct the research in the light of the World Health Organisation's statement which said that arecanut was carcinogenic. FILE PHOTO

Referring to problems being faced by areca farmers, he said a disease like "areolate mildew", which destroyed areca trees, was being addressed by scientific teams. The availability of clean planting material was also discussed, the release said.

The press note said that the Union Agriculture Minister informed that the government was seriously considering appropriate compensation to farmers for the heavy losses caused by viral infections.

Issues such as illegal imports of arecanut, moisture problems, and price differentials between small and large nuts were also extensively discussed, it added.

He promised that all issues would be resolved in a time-bound manner and that the interests of farmers and the arecanut industry would be fully protected.

Hindu Pg 06

Relentless rains: Pulses crop in four lakh hectares faces damage

SHRINIDHI R
DHARWAD, DHNS

Farmers who sowed pulses such as green gram and black gram during the kharif season are staring at heavy losses due to incessant rains.

According to estimates by the Agriculture Department, pulses grown on nearly four lakh hectares are now under threat of damage. Following early rains in mid-May, farmers in Dharwad, Belagavi, Haveri, Gadag and Bagalkot districts had taken up early sowing. With the crop now ready for harvest, untimely heavy showers have dealt a severe blow.

In Karnataka, green gram has been sown on 23.16 lakh hectares this kharif, of which nearly 70% (18 lakh hectares) is concentrated in central and north Karnataka. This makes it a major crop for districts such as Gadag, Haveri, Dharwad and parts of Belagavi and Bagalkot.

Farmers in over 14 taluks, encouraged by early rains in May, sowed green gram ahead of schedule. However, excessive rainfall in June and July damaged germinating crops across nearly two lakh hectares, forcing many farmers to switch to maize. Now, an additional four lakh hectares of green gram are waterlogged and at risk.



A green gram field in Nargund taluk of Gadag district is waterlogged. DH PHOTO

Black gram, sown on 11.46 lakh hectares across the state, including about four lakh hectares in central and north Karnataka, has also been hit. Officials estimate 10–15% of the black gram crop could be damaged.

"Last year too, August rains ruined the harvest and we managed barely 50% yield. The situation is no different this year. Nearly 60% of the crop is standing in water and facing damage," said Mallikarjun Hiremath, a farmer from Yadwad who has cultivated 20 acres of green gram and black gram.

Farmers in Nargund and Bagalkot raised their voice in protest, saying relentless rains had washed away their crops. They expressed anger at not receiving crop-loss compensation or insurance relief for the past two years.

Basangouda Malipatil, a farmer from Nargund, lamented successive losses.

"The crops were healthy, and we were expecting a bumper harvest. But the August rains destroyed everything. It is harvest time, yet continuous rains are preventing us from even entering the fields," he said.

MALLIKARJUN HIREMATH
Farmer from Yadwad

"Last year too, August rains ruined the harvest and we managed barely 50% yield. The situation is no different this year. Nearly 60% of the crop is standing in water and facing damage.

Meanwhile, green gram prices have surged in APMCs, touching Rs 9,000 per quintal, with market analysts predicting further escalation if crop damage continues.

Agriculture officials noted that farmers, eyeing a second crop, had deliberately opted for early sowing of green gram this year, making the damage more painful.

In the Dharwad district alone, green gram is cultivated on one lakh hectares, with nearly 60% of farmers opting for early sowing, said Joint Director of Agriculture Manjunath Antharvalli.

"This is a crucial harvest period, but relentless rains have caused great concern," he said.

Apart from green gram and black gram, soya and maize are also reeling under the threat of rain damage.

Dec Hrd Pg 04